ಓ.ಎಸ್. 143/2020 **ಡಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **15.11.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಬಿ.ಎ.ಎಸ್.ವಕೀಲ**ರಿಂದ**

ಸುಬ್ಬಮ್ಮನ ಮಗ ತಿಮ್ಮೇಗೌಡರಿಗೆ ಜಮೀನುಗಳನ್ನು ತೆಗೆದುಕೊಟ್ಟಿದ್ದೆ ಎಂದು ಹೇಳಿದ್ದು ಯಾವ ಯಾವ ದಿನಾಂಕದಂದು ಯಾವ ಯಾವ ಸರ್ವೆ ನಂ.ಗಳಲ್ಲಿ ಜಮೀನುಗಳಲ್ಲಿ ತೆಗೆದುಕೊಟ್ಟಿದ್ದೇವೆ ಎಂದರೆ ಸಾಕ್ಷಿ ಸರ್ವೆ ನಂ. 133 ರನ್ನು ಕುಂಟನಾಯಕರಿಂದ ತೆಗೆದುಕೊಟ್ಟಿದ್ದೇವೆ ಅದರ ದಿನಾಂಕ ನೆನಪಿಲ್ಲ. ಅದರ ಕ್ರಯ ಪತ್ರವನ್ನು ಇಲ್ಲಿ ಹಾಜರು ಪಡಿಸಿಲ್ಲ. ಸರ್ವೆ ನಂ. 111 ಅನ್ನು ಸಿದ್ದಮ್ಮನವರಿಂದ ಖರೀದಿಸಿಕೊಟ್ಟಿದ್ದೆವು. ಎಷ್ಟು ಹಣಕ್ಕೆ ಖರೀದಿಸಿದ್ದೇವು ಎಂದು ಗೊತ್ತಿಲ್ಲ. ಈಗ ಕುಂಟನಾಯಕ ಮತ್ತು ಸಿದ್ದಮ್ಮ ಜೀವಂತ ಇರುವುದಿಲ್ಲ. ಸದರಿ ಕ್ರಯಪತ್ರಗಳಿಗೆ ಸಾಕ್ಷಿದಾರರು ಗೊತ್ತಿಲ್ಲ. ಸದರಿ ಪತ್ರಗಳನ್ನು ಬರೆದವರು ಯಾರು ಎಂದು ಗೊತ್ತಿಲ್ಲ. ತಿಮ್ಮೇಗೌಡರಿಗೆ ಜಮೀನು ತೆಗೆದುಕೊಟ್ಟಿದ್ದೇವೆ ಎಂದು ಹೇಳಿರುವ ಬಗ್ಗೆ ಒಂದೂ ಕ್ರಯ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರಗಳನ್ನು ಹಾಜರು ಪಡಿಸಿಲು ತೊಂದರೆ ಏನು ಇಲ್ಲ.

ವಾದಿಗಳು ಯಾವ ಯಾವ ಸರ್ವೆ ನಂ. ಜಮೀನುಗಳ ಬಗ್ಗೆ ಈ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತು. ಆ ಬಗ್ಗೆ ನಾನು ಜಮೀನುಗಳ ಪಹಣಿ ಮತ್ತು ಇತರ ಯಾವುದೆ ದಾಖಲೆಗಳನ್ನು ಇಲ್ಲಿ ಹಾಜರು ಪಡಿಸಿಲ್ಲ. ದಾವಾ ಆಸ್ತಿಗಳು ತಮ್ಮಣ್ಣೇಗೌಡರ ಹೆಸರಿಗೆ ಖಾತೆ ಆಗಿರುವ ಬಗ್ಗೆ ದಾಖಲೆ ಇದೆ. ಅದನ್ನು ಇಲ್ಲಿ ಹಾಜರು ಪಡಿಸಿಲ್ಲ. ಸಾಕ್ಷಿ ಪುನಃ ನುಡಿಯುತ್ತಾರೆ ತಮ್ಮಣ್ಣೇಗೌಡರ ಹೆಸರಿಗೆ ಖಾತೆ ಆಗಿಲ್ಲ. ದಾವಾ ಆಸ್ತಿಗಳು ಮೂಲತಃ ಅಪ್ಪಾಜಿಗೌಡರಿಗೆ ಸೇರಿದ್ದವು ಎಂದರೆ ಸಾಕ್ಷಿ ಅಪ್ಪಾಜಿಗೌಡರಿಗೆ, ಸೋಮೇಗೌಡ ಮತ್ತು ತಮ್ಮಣ್ಣೇಗೌಡರಿಗೆ ಸೇರಿದ್ದವು ಎನ್ನುತ್ತಾರೆ. ಮೂಲತಃ ದಾವಾ ಸ್ವತ್ತುಗಳು ಅಪ್ಪಾಜಿಗೌಡರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಅವರು ಜೀವಂತ ಇರುವವರೆಗೂ ಅವರೆ ಮನೆ

ಯಜಮಾನಿಕೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳೆಲ್ಲಾ ಅಪ್ಪಾಜಿಗೌಡರ ಹೆಸರಿನಲ್ಲಿಯೆ ಇದ್ದವು ಎಂದರೆ ಕೆಲವು ಆಸ್ತಿಗಳು ಅವರ ಹೆಸರಿನಲ್ಲಿ ಇದ್ದವು. ಅಪ್ಪಾಜಿಗೌಡರು ಮರಣ ಹೊಂದಿದ ನಂತರ ಸ್ವಲ್ಪ ತಿಳುವಳಿಕೆ ಉಳ್ಳವರಾಗಿದ್ದ ಸೋಮೇಗೌಡರು ಮನೆಯ ಯಜಮಾನಿಕೆಯನ್ನು ಮಾಡಿಕೊಂಡು ಬಂದರು ಎಂದರೆ ಸುಳ್ಳು. ಈ ರೀತಿ ಸೋಮೇಗೌಡರು ಮನೆಯ ಯಜಮಾನಿಕೆಯನ್ನು ಮಾಡಿಕೊಂಡು ಬರುತ್ತಿದ್ದ ಕಾರಣ ಪಿತ್ರಾರ್ಜಿತ ಆಸ್ತಿಗಳ ಖಾತೆಗಳು ಸೋಮೇಗೌಡರ ಹೆಸರಿಗೆ ವರ್ಗಾವಣೆ ಆದವು ಎಂದರೆ ಸುಳ್ಳು. ನನ್ನ ತಾತ ಅಪ್ಪಾಜಿಗೌಡ ಮರಣ ಹೊಂದಿದಾಗ ನಾನು ಇನ್ನೂ ಹುಟ್ಟಿರಲಿಲ್ಲ. ನನ್ನ ತಾತ ಅಪ್ಪಾಜಿಗೌಡರು ಮರಣ ಹೊಂದುವಾಗ ನಾನು ಹುಟ್ಟಿರಲಿಲ್ಲವಾದ ಕಾರಣ ಅಪ್ಪಾಜಿಗೌಡರ ನಂತರ ಮನೆಯ ಯಜಮಾನಿಕೆಯನ್ನು ಯಾರು ಮಾಡುತ್ತಿದ್ದರು ಮತ್ತು ಖಾತೆಗಳು ಯಾರ ಹೆಸರಿಗೆ ಬದಲಾವಣೆ ಆದವು ಎಂಬ ವಿಚಾರವನ್ನು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ತಮ್ಮೇಗೌಡರು ಮತ್ತು ಸೋಮೇಗೌಡರು ಇಬ್ಬರು ಮನೆಯ ಯಜಮಾನಿಕೆ ಮಾಡುತ್ತಿದ್ದರು. ತಮ್ಮೇಗೌಡರು ಮನೆಯ ಯಜಮಾನಿಕೆ ಮಾಡುತ್ತಿದ್ದ ಬಗ್ಗೆ ಖಾತೆಗಳು ಅವರ ಹೆಸರಿಗೆ ಆಗಿದ್ದವು. ತಮ್ಮೇಗೌಡರ ಹೆಸರಿಗೆ ಅರ್ಧ ಆಸ್ತಿಗಳು, ಸೋಮೇಗೌಡರ ಹೆಸರು ಅರ್ಧ ಆಸ್ತಿಗಳು ಆಗಿದ್ದವು. ಈ ಬಗ್ಗೆ ದಾಖಲೆಯನ್ನು ನಾನು ಇನ್ನೂ ಹಾಜರು ಪಡಿಸಿಲ್ಲ. ತಮ್ಮೇಗೌಡರಿಗೆ ಸುಮಾರು 1950 ರಲ್ಲಿ ಖಾತೆಗಳು ಬದಲಾವಣೆ ಆದವು. ಈ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಅಪ್ಪಾಜಿ ಗೌಡರು ಮರಣ ಹೊಂದಿದ ನಂತರ ಮನೆಯ ಯಜಮಾನಿಕೆಯನ್ನು ವಹಿಸಿಕೊಂಡಿದ್ದ ಸೋಮೇಗೌಡರ ಹೆಸರಿಗೆ ದಾವಾ ಆಸ್ತಿಗಳ ಖಾತೆಗಳು ಬದಲಾವಣೆ ಆಗಿದ್ದವು ಎಂದರೆ ಸುಳ್ಳು.

ಸೋಮೇಗೌಡರ ಮರಣಾ ನಂತರ ಅವರ ಮಕ್ಕಳಾದ ಚಂದ್ರೇಗೌಡರ ಮತತ್ತು ಶಿವಣ್ಣೇಗೌಡ ರ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಹಾತೆ ವರಗಾಣೆ ಆಗಿರುವುದು ನಿಜ ಅವರಿಬ್ಬರೂ ಸೋಮೆಗೌಡರಿಗೆ ಸಾಕು ಮಕ್ಕಳು ಎನ್ನುತ್ತಾರೆ. ನನ್ನ ತಂದೆ ಚಂದ್ರೇಗೌಡ ಅಲಿಯಾಸ್ ಚಂದ್ರಹಾಸ್ ರವರು ಸೋಮೇಗೌಡರವರ ಸಾಕು ಮಗ ಆಗಿದ್ದಾರೆ. ಈ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಆದರೆ

ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ.  ನನ್ನ ತಂದೆ ಚಂದ್ರೇಗೌಡರನ್ನು ಮತ್ತು ಶಿವಣ್ಣೇಗೌಡರನ್ನು  ಸೋಮೆಗೌಡರು 1954 ರಲ್ಲಿ ದತ್ತು ತೆಗೆದುಕೊಂಡಿದ್ದರು. 1954 ರಲ್ಲಿ ನನ್ನ ತಂದೆ 1 ವರ್ಷ ಮಗು, ನನ್ನ ದೊಡ್ಡಮ್ಮ ಶವಣ್ಣೇಗೌಡರು 3 ವರ್ಷದ ಮಗು  ಆಗಿದ್ದರು.  ತಮ್ಮೇಗೌಡರ ಮಕ್ಕಳಾಗಿದ್ದ  ನನ್ನ ತಂದೆ  ಚಂದ್ರೇಗೌಡರನ್ನು ಮತ್ತು  ನನ್ನ ದೊಡಪ್ಪ ಶಿವಣ್ಣೇಗೌಡರನ್ನು   ನನ್ನ ತಾತ ಸೋಮೇಗೌಡರು ದತ್ತು ತೆಗೆದುಕೊಂಡು ಎಂದು ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಆ ಬಗ್ಗೆ ದತ್ತು ಪತ್ರ ನೊಂದಣಿ ಆಗಿದೆ. ಅದನ್ನು ಇಲ್ಲಿ ಹಾಜರು ಪಡಿಸಿಲ್ಲ.  ವಾದಿ ಸುಂದ್ರಮ್ಮ  ತಮ್ಮೇಗೌಡರ ಸೊಸೆ,  2 ನೇ ವಾದಿ ಭಾಸ್ಕರ  ತಮ್ಮೇಗೌಡರ ಮೊಮ್ಮಗ ಎಂದರೆ ಸರಿ. ತಮ್ಮೆಗೌಡರ ಮಗ ತಿಮ್ಮೇಗೌಡ ಎಂದರೆ 2 ನೇ ವಾದಿ ಭಾಸ್ಕರ ರವರ ತಂದೆ ಎಂದರೆ ಸುಳ್ಳು.  ದಾವಾ ಸರ್ವೆ ನಂ. 32 ರಲ್ಲಿ ಒಟ್ಟು 9 ಎಕರೆ 32 ಗುಂಟೆ ಜಮೀನು ಇದೆ. ಈ ಸ್ವತ್ತಿನ ಪೈಕಿ 4 ಎಕರೆ, 7 ಗುಂಟೆ ರಾಜಮ್ಮ, ಕೆಂಪರಾಜೇಗೌಡ , ರಾಜ್ ಕುಮಾರ್ ಮತ್ತು  ಕೌಸಲ್ಯ ರವರ ಹೆಸರಿನಲ್ಲಿ ಇದೆ.  ನನ್ನ ಹೆಸರಿನಲ್ಲಿ 4 ಎಕರೆ 7 ಗುಂಟೆ ಇದೆ. ಉಳಿಕೆ 1 ಎಕರೆ 1 ನೇ ವಾದಿ ಹೆಸರಿನಲ್ಲಿ ಇದ್ದು, ಅದನ್ನು ಅಕ್ರಮವಾಗಿ ಮಾಡಿಕೊಂಡಿದ್ದಾರೆ.  1 ನೇ ವಾದಿ ಹೆಸರಿಗೆ ಖಾತೆಯು ತೀಮ್ಮೆಗೌಡರ ಹೆಸರಿನಿಂದ ಬಂದಿದೆ. ತಿಮ್ಮೇಗೌಡರ ಹೆಸರಿಗೆ ಆಗಿರುವುದೆ ಅಕ್ರಮ ಎಂದು ಹೇಳುತ್ತಿದ್ದೇನೆ. ಅವರು ಸೋಮೇಗೌಡರ ಹೆಸರಿನಿಂದ 1992-93 ರಲ್ಲಿ ಅಕ್ರಮವಾಗಿ ಖಾತೆ ಮಾಡಿಕೊಂಡಿದ್ದಾರೆ. ಈ ರೀತಿ ತಿಮ್ಮೇಗೌಡರಿಂದ ಅಕ್ರಮವಾಗಿ ಖಾತೆ ಮಾಡಿಕೊಂಡಿದ್ದಾರೆ ಎಂದು ಎ.ಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಕ್ರಮ ತೆಗೆದುಕೊಂಡಿದ್ದೇವೆ. ಸದರಿ ಮೊಕದ್ದಮೆಯನ್ನು 2001ರಲ್ಲಿ  ಹೂಡಲಾಗಿದ್ದು ಅದರಲ್ಲಿ ಇನ್ನೂ ಆದೇಶ ಆಗಿರುವುದಿಲ್ಲ. ಸದರಿ ಮೊಕದ್ದಮೆ ಸಂಖ್ಯೆ ನನಗೆ ಗೊತ್ತಿಲ್ಲ, ಅದನ್ನು ನಾನೆ ಹಾಕಿದ್ದೇನೆ. ಸೋಮೆಗೌಡರು ಮತ್ತು ತಿಮ್ಮೆಗೌಡರ ತೀರಿಕೊಂಡ ನಂತರ ಸೋಮೇಗೌಡರ ಹೆಸರನಲ್ಲಿ ಇದ್ದಂತಹ ಆಸ್ತಿಗಳನ್ನು ಅವರ ಮಕ್ಕಳಾದ ಚಂದ್ರೇಗೌಡ  ಮತ್ತು ಶಿವಣ್ಣೆಗೌಡರು ತಮ್ಮಗಳ   ಹೆಸರಿಗೆ  ಖಾತೆ ಬದಲಾವಣೆ ಮಾಡಿಕೊಂಡರು ಎಂದರೆ ಸತ್ಯ. ನಾಗಮ್ಮನವರ ಹೆಸರಿಗೂ ಕೂಡ ಖಾತೆ  ಆಗಿತ್ತು ಎನ್ನುತ್ತಾರೆ. ಆ ಸಮಯದಲ್ಲಿ 1 ಎಕರೆ ಮಾತ್ರ ತಮ್ಮೇಗೌಡರ ಮಗ ತಿಮ್ಮೇಗೌಡರಿಗೆ ಖಾತೆ ವರ್ಗಾವಣೆ ಮಾಡಿದ್ದು, ಉಳಿಕೆ ಜಮೀನನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದರೆ ಅವರಿಗೂ ನಮಗೂ

ಸಂಬಂಧ ಇಲ್ಲ ಅಕ್ರಮವಾಗಿ ಮಾಡಿಸಿಕೊಂಡಿದ್ದಾರೆ. ಈ ವಿಚಾರ ಎಲ್ಲಾ ಗೊತ್ತಾದ ನಂತರ ವಾದಿಗಳೆಲ್ಲಾ ಬಂದು ನಮಗೂ ಭಾಗ ಬೇಕು ಎಂದು ಕೇಳಿದ್ದರು ಎಂದರೆ ಸುಳ್ಳು. ಈ ರೀತಿ ನಾವು ಭಾಗ ಕೊಡಲಿಲ್ಲ ಎಂದು ವಾದಿಯರೂ ನಮಗೆ ವಕೀಲರ ಮೂಲಕ ನೊಟೀಸು ಕೊಟ್ಟಿದ್ದಾರೆ ಎಂದರೆ ನೊಟೀಸು ಬಂದಿರುವುದು ನಿಜ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ ನಮ್ಮ ತಾತ ಮಾಡಿಕೊಟ್ಟಿದ್ದ ಜಮೀನೆಲ್ಲಾ ಮಾರಿಕೊಂಡು ತಿಂದು ಆನಂತರ ಬಂದು ಭಾಗ ಕೇಳಿದ್ದಾರೆ. ಅವರು ಮಾರಾಟ ಮಾಡಿರುವುದು ಅವರ ಇಷ್ಟ ಎಂದು ನಾವು ಅವುಗಳ ಯಾವುದೆ ಕ್ರಮ ತೆಗೆದುಕೊಂಡಿರಲಿಲ್ಲ.

ನಾನು ಹೇಳಿದಂತೆ ಯಾವುದೆ ಜಮೀನುಗಳನ್ನು 1 ನೇ ವಾದಿಯ ಗಂಡನ ಹೆಸರಿಗೆ ತೆಗೆದುಕೊಟ್ಟಿರಲಿಲ್ಲ ಸದರಿ ಜಮೀನುಗಳನ್ನು ಅವರಿಗೆ ಅವರ ತಾಯಿ ಸುಬ್ಬಮ್ಮನವರ ತಾಯಿಯ ಮನೆ ಕಡೆಯಿಂದ ಕೊಟ್ಟಿದ್ದರು ಎಂದರೆ ಸುಳ್ಳು. ಅದೆ ರೀತಿ ಅವರು ಮಾರಾಟ ಮಾಡಿ ಬಂದಂತಹ ಹಣವನ್ನು ನಮ್ಮ ಒಟ್ಟು ಕುಟುಂಬಕ್ಕೆ ನಾವು ಉಪಯೋಗಿಸಿಕೊಂಡಿದ್ದೇವೆ ಎಂದರೆ ಸುಳ್ಳು. ವಾದಿಯವರಿಗೆ ದಾವಾ ಸ್ವತುಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು 2 ನೇ ವಾದಿಯ ತಂದೆ 1 ನೇ ವಾದಿಯ ಗಂಡ ತಿಮ್ಮೆಗೌಡರು ತಮ್ಮೇಗೌಡರ ಮಗ ಅಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮೇಗೌಡರ ತಂದೆ ಹೆಸರು ಹೊನಕೆರೆಗೌಡ. ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ತಿಮ್ಮೇಗೌಡ ತಮ್ಮೆಗೌಡರ ಮಗ ಆಗಿದ್ದರೂ ಕೂಡ ಅವರಿಗೆ ಭಾಗ ಕೊಡಿಸಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಮಾರಾಟ ಮಾಡಿರುವಂತಹ ದಾಖಲೆಗಳನ್ನು ಮಾತ್ರ ನಾನು ಹಾಜರು ಪಡಿಸಿ, ಅವರು ಕ್ರಯಕ್ಕೆ ಪಡೆದಂತಹ ದಾಖಲೆಗಳನ್ನು ಇಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಬಗ್ಗೆ ಕೂಡ ನಾನು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ ದಾಖಲೆಗಳನ್ನು ಹಾಜರು ಪಡಿಸಿದಲ್ಲಿ ನಿಜಾಂಶ ತಿಳಿಯುತ್ತದೆ ಎಂದೆ ಇಲ್ಲಿ ಯಾವುದೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಪಿ.ಡಬ್ಲ್ಯೂ 2 ಮತ್ತು 3

ರವರೊಂದಿಗೆ ನಮಗೆ ಯಾವುದೆ ದ್ವೇಷ ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೂ ಹಿಸ್ಸೆ ಇದೆ ಅವರು ಕೂಡ  ಹಕ್ಕುದಾರರು ಎಂದರೆ ಸುಳ್ಳು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.